# ಬಸವಣ್ಣನವರ ವಚನಗಳಲ್ಲಿ ತಳವರ್ಗದ ಅಭಿವ್ಯಕ್ತಿಯ ಸ್ವರೂಪ

**ರಮೇಶ್ ಎಮ್. ಗೋನಾಳ್**

ಸಂಶೋಧನ ವಿದ್ಯಾರ್ಥಿ, ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ.

DOI: https://doi.org/10.5281/zenodo.15791432

## ABSTRACT:

೧೨ನೇ ಶತಮಾನದ ವಚನ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದವರು ಬಸವಣ್ಣನವರು. ಬಾಲ್ಯದಿಂದಲೇ ಉಪನಯನವನ್ನು ತಿರಸ್ಕರಿಸುವ ಮೂಲಕ ಸಮಾಜ ವಿರೋಧಿ ಚಟುವಟಿಕೆಗಳ ವಿರುದ್ಧ ತಮ್ಮ ಧ್ವನಿ ಎತ್ತಿದರು. ಜಾತಿ, ಲಿಂಗ, ಬಡವ-ಬಲ್ಲಿದ, ಮೇಲು-ಕೀಳು ಎಂಬಂತಹ ತಾರತಮ್ಯಗಳ ವಿರುದ್ಧ ಹೋರಾಡಿ ಜಾಗತಿಕ ನಾಯಕರೆನಿಸಿದ್ದಾರೆ. ವೈದಿಕ ಧರ್ಮದ ಚಾತುರ್ವರ್ಣ ಪದ್ಧತಿಯಿಂದಾಗಿ ಶೂದ್ರ ಮತ್ತು ಪಂಚಮ ವರ್ಗದವರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ನಡೆಸಿಕೊಳ್ಳಲಾಗುತ್ತಿತ್ತು. ಶಾಸ್ತ್ರಗಳ ಹೆಸರಿನಲ್ಲಿ ಜನರನ್ನು ಸುಲಿಗೆ ಮಾಡಲಾಗುತ್ತಿತ್ತು. ಬಿಟ್ಟಿ ದುಡಿಮೆ ಮಾಮೂಲಾಗಿತ್ತು. ಶೂದ್ರರು ಅಸ್ಪೃಶ್ಯರು ಎಂದು ತಳಬುಡವಿಲ್ಲದ ಭೇದಭಾವ ಮಾಡಿ ಅವರನ್ನು ಶೋಷಣೆ, ಸುಲಿಗೆ ಮಾಡುತ್ತಿದ್ದರು. ಇದೆಲ್ಲವನ್ನೂ ಕಣ್ಣಾರೆ ಕಂಡ ಬಸವಣ್ಣನವರು 12ನೇ ಶತಮಾನದಲ್ಲಿ ವಚನ ಚಳುವಳಿಯ ಮೂಲಕ ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡುವ ಜಾಗತಿಕ ಆಂದೋಲನ ಮಾಡಿದರು. ಬಸವಣ್ಣನವರು ತಮ್ಮ ನಡೆ-ನುಡಿಗಳಲ್ಲಿಯೂ ತಳವರ್ಗದವರನ್ನು, ಶೂದ್ರರನ್ನು ಆತ್ಮೀಯವಾಗಿ ಕಂಡು ಅವರಿಗೂ ಬದುಕುವ ಹಕ್ಕಿದೆ ಮತ್ತು ಸಮಾಜದಲ್ಲಿ ಗೌರವಯುತ ಬದುಕು ನಡೆಸಲು ಅನುವು ಮಾಡಿಕೊಟ್ಟರು. ಭವಿಗಳನ್ನು ಶರಣರನ್ನಾಗಿ ಮಾಡಿದರು. ತಮ್ಮ ವಚನಗಳಲ್ಲಿ ತಳವರ್ಗದವರನ್ನು ತಮ್ಮ ಬಂಧುವಂತೆ, ಅಣ್ಣ, ಅಪ್ಪ ಮೊದಲಾದ ಸಂಬಂಧ ಸೂಚಕ ಶಬ್ದಗಳನ್ನು ಬಳಸಿ, ಅವರನ್ನು ಬಿಗಿದಪ್ಪಿಕೊಂಡಿದ್ದಾರೆ. "ಇವನಾರವ ಇವನಾರವ ಇವನಾರವ ಎಂದೆನಿಸದೆ ನಿಮ್ಮ ಮನೆಯ ಮಗನೆಂದೆನಿಸಯ್ಯ" ಎಂದು ತಳವರ್ಗದ ಕುರಿತು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಬಸವಣ್ಣನವರ ವಚನಗಳಲ್ಲಿ ತಳವರ್ಗದ ಕುರಿತು ವ್ಯಕ್ತಗೊಂಡ ಚಿಂತನೆಗಳನ್ನು ಚರ್ಚಿಸುವುದು ಈ ಲೇಖನದ ಗುರಿ ಮತ್ತು ಉದ್ದೇಶವಾಗಿದೆ.

## KEYWORDS:

ಬಸವಣ್ಣ, ಅಭಿವ್ಯಕ್ತಿ, ತಳವರ್ಗ, ಜಾತಿ ನಿರಸನ, ವೈಶಿಷ್ಟ್ಯತೆ.

ಹನ್ನೆರಡನೆಯ ಶತಮಾನದ 'ವಚನ ಚಳುವಳಿಗೆ' ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ. ಜಾತಿ, ಲಿಂಗ ತಾರತಮ್ಯವಿಲ್ಲದೆ ಇಲ್ಲಿ ಎಲ್ಲರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಮಾನಾವಕಾಶ ನೀಡಲಾಗಿತ್ತು. ಇದರಿಂದ ಅನೇಕ ಶರಣ-ಶರಣೆಯರು ತಮ್ಮ ತಮ್ಮ ಕಾಯಕಗಳನ್ನು ಮಾಡುತ್ತಲೇ ವಚನಗಳ ಮೂಲಕ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಲು ಇದು ನೆರವಾಯಿತು. ಬಸವಣ್ಣನವರ ನೇತೃತ್ವದಲ್ಲಿ ನಡೆದ ಈ ಚಳುವಳಿ ಜಾಗತಿಕವಾಗಿಯೂ ಗಮನಾರ್ಹವಾದ ಸಂಗತಿಯಾಗಿದೆ.

ಬಸವಣ್ಣನವರ ವಚನಗಳ ಅಂಕಿತ 'ಕೂಡಲ ಸಂಗಮ' ವಾಗಿದ್ದು ಅವರ ವಚನಗಳ ಅಭಿವ್ಯಕ್ತಿ ತುಂಬಾ ವಿಶಿಷ್ಟತೆಯಿಂದ ಕೂಡಿದೆ. ಬಸವಣ್ಣನವರ ಕಾವ್ಯ ಧೋರಣೆ 'ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂಬ ಕಾವ್ಯ ಧೋರಣೆ ಹೊಂದಿದೆ. ಬಸವಣ್ಣನವರು ತಮ್ಮ ವಚನದಲ್ಲಿ 'ನಿನಗೆ ಕೇಡಿಲ್ಲವಾಗಿ ಹಾಡುವೆ ಎಂಬಲ್ಲಿ' ಸಾಮಾಜಿಕ ಜವಾಬ್ದಾರಿ, 'ಆನು ಒಲಿದಂತೆ ಹಾಡುವೆ' ಎಂಬಲ್ಲಿ 'ವೈಯಕ್ತಿಕ ಸ್ವಾತಂತ್ರ್ಯ' ಇವು ಕವಿಗಿರಬೇಕು ಎಂಬುದನ್ನು ಅವರು ಸ್ಪಷ್ಟಪಡಿಸುತ್ತಾರೆ. ಬಸವಣ್ಣನವರ ಇನ್ನೊಂದು ವಚನ 'ನುಡಿದರೆ ಮುತ್ತಿನ ಹಾರದಂತಿರಬೇಕು' ಇದು ಕೊನೆಯಲ್ಲಿ ವ್ಯಕ್ತಿಯ ನಡೆ-ನುಡಿ ಏಕವಾಗಿರಬೇಕು ಎಂಬುದನ್ನು ಅಭಿವ್ಯಕ್ತಪಡಿಸುತ್ತದೆ.

ಬಸವಣ್ಣನವರ ನೇತೃತ್ವದಲ್ಲಿ ನಡೆದ ಈ ವಚನ ಚಳುವಳಿ ತಳವರ್ಗ-ಮೇಲ್ವರ್ಗ ಎನ್ನದೆ ಎಲ್ಲರನ್ನು ಒಳಗೊಂಡಿತ್ತು. ಬಸವಣ್ಣನವರು ತಳವರ್ಗದವರನ್ನು ಒಳಗೊಳ್ಳಲು ತಮ್ಮ ನಡೆ-ನುಡಿ ಜೊತೆಗೆ ತಮ್ಮ ವಚನಗಳಲ್ಲಿಯೂ ಅಭಿವ್ಯಕ್ತಪಡಿಸುವ ಮೂಲಕ ತಮ್ಮನ್ನು ತಳವರ್ಗದ ಶರಣರೊಂದಿಗೆ ಗುರುತಿಸಿಕೊಳ್ಳುವ ಪ್ರಯತ್ನ ಮಾಡಿರುವುದು ಕಾಣಬಹುದು.

**ಚೆನ್ನಯ್ಯನ ಮನೆಯ ದಾಸನ ಮಗನು,**
**ಕಕ್ಕಯ್ಯನ ಮನೆಯ ದಾಸಿಯ ಮಗಳು,**
**ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ, ಸಂಗವ ಮಾಡಿದರು.**
**ಇವರಿಬ್ಬರಿಗೆ ಹುಟ್ಟಿದ ಮಗ ನಾನು,**
**ಕೂಡಲ ಸಂಗಮ ದೇವ ಸಾಕ್ಷಿಯಾಗಿ**[1]

**(ವಚನಸಂಖ್ಯೆ-346)**

ಬಸವಣ್ಣನವರ ಇನ್ನೊಂದು ವಚನ 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ' ಇಲ್ಲಿ ತಮ್ಮ ಹುಟ್ಟಿನ ಬಗ್ಗೆಯಾಗಲಿ, ಜಾತಿಯ ಬಗ್ಗೆಯಾಗಲಿ ಯಾವುದೇ ಮೇಲರಿಮೆ ಅಥವಾ ಅಹಂಕಾರವಾಗಲಿ ಕಂಡುಬರುವುದಿಲ್ಲ. ಅವರು ತಮ್ಮ ಹುಟ್ಟನ್ನು 'ಚೆನ್ನಯ್ಯನ ಮನೆಯ ದಾಸನ ಮಗನಿಗೆ ಮತ್ತು ಕಕ್ಕಯ್ಯನ ಮನೆಯ ದಾಸಿಯ ಮಗಳಿಗೆ ಇವರಿಬ್ಬರ ಸಂಗದಿಂದ ಹುಟ್ಟಿದೆ' ಎಂದು ಯಾವುದೇ

ಭಯವಿಲ್ಲದೆ ನಿರ್ಭೀತಿಯಿಂದ ಮತ್ತು ಅಷ್ಟೇ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಮತ್ತು ತಮ್ಮ ಇನ್ನೊಂದು ವಚನದಲ್ಲಿ 'ಕೂಡಲ ಸಂಗಮದೇವಾ ಭಕ್ತರಲ್ಲಿ ಕುಲವನರಸಿದಡೆ ನಿಮ್ಮ ರಾಣಿವಾಸದಾಣೆ' ಭಕ್ತರ ಕುಲವನರಸುವುದಿಲ್ಲವೆಂದು ಹೇಳುತ್ತಾರೆ.

**ಬಸವಣ್ಣನವರ ಇನ್ನೊಂದು ವಚನ**
**ಅಪ್ಪನು ನಮ್ಮ ಮಾದಾರ ಚೆನ್ನಯ್ಯ,**
**ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ,**
**ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ.**
**ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ,**
**ಎನ್ನನೇತಕ್ಕರಿಯರಿ? ಕೂಡಲಸಂಗಯ್ಯಾ[2]**

**(ವಚನಸಂಖ್ಯೆ-349)**

ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ ಎಂದು ಹೇಳುವಲ್ಲಿ ಬಸವಣ್ಣನವರು ತಾವು ತಳವರ್ಗದವರ ಮನೆಯ ಮಗನು ಎಂದು ಯಾವುದೇ ಸಂದೇಹವಿಲ್ಲದೆ ನುಡಿಯುತ್ತಾರೆ. ಬಸವಣ್ಣನವರು 'ಏನಯ್ಯ ವಿಪ್ರರು ನುಡಿದಂತೆ ನಡೆಯರು, ತಮಗೊಂದು ಬಟ್ಟೆ, ಶಾಸ್ತ್ರಕೊಂದು ಬಟ್ಟೆ!' ಎಂದು ವಿಪ್ರರ ದಬ್ಬಾಳಿಕೆ ಜರಿಯುತ್ತಲೇ ಮತ್ತು 'ವ್ಯಾಸ ಬೋವಿತಿಯ ಮಗ, ಮಾರ್ಕಾಂಡೇಯ ಮಾತಂಗಿಯ ಮಗ' ಹಾಗೂ 'ಆವ ಕುಲವಾದಡೇನು? ಶಿವಲಿಂಗವಿದ್ದವನೆ ಕುಲಜನು, ಕುಲವನರಸುವರೆ ಶರಣರಲ್ಲಿ, ಜಾತಿ ಸಂಕರವಾದ ಬಳಿಕ' ಇನ್ನು ಮೊದಲಾದ ವಚನಗಳ ಮೂಲಕ 'ಶಿವಭಕ್ತರೆ ಕುಲಜರು' ಎಂದು ಪ್ರತಿಪಾದಿಸುತ್ತಾ ಆ ಮೂಲಕ ತಾವು ತಳವರ್ಗದ ಪ್ರತಿನಿಧಿಯಾಗಿ ಮತ್ತು ತಳವರ್ಗದವರನ್ನು ಸಮಾನತೆ ಆಶಯದಲ್ಲಿ ಒಳಗೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಎಂದು ಹೇಳಬಹುದು.

**ಉಳ್ಳವರು ಶಿವಾಲಯ ಮಾಡಿಹರು, ನಾನೇನ ಮಾಡುವೆ ಬಡವನಯ್ಯಾ.**
**ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರ ಹೊನ್ನಕಲಶವಯ್ಯಾ.**
**ಕೂಡಲಸಂಗಮದೇವಾ, ಕೇಳಯ್ಯಾ**
**ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ[3]**
**(ವಚನ ಸಂಖ್ಯೆ-25)**

ಬಸವಣ್ಣನವರ ಈ ವಚನವು ದೇಗುಲ ಅಥವಾ ಗುಡಿ ಸಂಸ್ಕೃತಿಯನ್ನು ಮೇಲ್ನೋಟಕ್ಕೆ ನಿರಾಕರಿಸಿದಂತೆ ಕಾಣುತ್ತದೆ. ಈ ವಚನದ ಆಶಯವನ್ನು ಇನ್ನೂ ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದಾಗ ಹಲವು ಆಯಾಮಗಳಿರುವುದು ಕಂಡುಬರುತ್ತವೆ. ಈ ವಚನವು 'ಉಳ್ಳವರು ಶಿವಾಲಯವ ಮಾಡುವರು' ಎಂಬ ಸಾಮಾಜಿಕ ವಸ್ತುಸ್ಥಿತಿಯಿಂದ ಆರಂಭವಾಗಿ 'ನಾನೇನು ಮಾಡುವೆ ಬಡವನಯ್ಯ' ಎನ್ನುವಲ್ಲಿ ಬಡತನದ ಅಸಹಾಯಕತೆಯನ್ನು ಹೇಳುತ್ತದೆ.

ಇನ್ನು 'ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶ'

ಎನ್ನುವುದು ದೇಗುಲಕ್ಕೆ ಹೇಗೆ ಕಂಬಗಳು ಅಡಿಪಾಯವೋ, ಹಾಗೆಯೇ ದೇಹಕ್ಕೆ ಕಾಲುಗಳು ಅಡಿಪಾಯವಾಗಿರುವುದನ್ನು ಇದು ಸೂಚಿಸುತ್ತದೆ. ಇದು ವೈದಿಕರ 'ಚಾತುರ್ವರ್ಣ ಪದ್ಧತಿ'ಗೆ ಪರ್ಯಾಯವಾಗಿ ಕಾಲುಗಳು ಕೂಡ ಶ್ರೇಷ್ಠ ಎನ್ನುವ ತಳವರ್ಗವನ್ನು ಆ ಮೂಲಕ ಎತ್ತಿ ಹಿಡಿಯುವ ರೂಪಕ-ಪ್ರತಿಮಾತ್ಮಕ ನೆಲೆಯಲ್ಲಿ ಹೇಳಿದಂತೆ ಭಾಸವಾಗುತ್ತದೆ. ಹೀಗೆ ಬಸವಣ್ಣನವರು ಸಮ-ಸಮಾಜದ ನಿರ್ಮಾಣದ ಆಶಯದಲ್ಲಿ ತಳವರ್ಗವನ್ನು ತಮ್ಮ ವಚನಗಳಲ್ಲಿ ಅಭಿವ್ಯಕ್ತಪಡಿಸುವ ಮೂಲಕ ಸಮಾಜದ ಮುನ್ನೆಲೆಗೆ ತರುವ ಪ್ರಯತ್ನ ಮಾಡಿರುವುದು ಗಮನಾರ್ಹ ಸಂಗತಿಯಾಗಿದೆ.

ಈಗಾಗಲೇ ಅನೇಕ ವಿದ್ವಾಂಸರು ಗುರುತಿಸಿದಂತೆ ಬಸವಣ್ಣನವರ ವಚನಗಳಲ್ಲಿ 'ವ್ಯಕ್ತಿತ್ವ ಶೋಧ' ಅಥವಾ 'ಆತ್ಮ ವಿಮರ್ಶೆ' ಪ್ರಧಾನವಾಗಿ ಕಂಡುಬರುತ್ತವೆ. ಬಸವಣ್ಣನವರ ವಚನಗಳ ಇನ್ನೊಂದು ಮುಖ 'ಸಮಾಜ ಶೋಧ'ವಾಗಿದೆ ಮತ್ತು ಸಾಮಾಜಿಕ ಅನ್ಯಾಯವನ್ನು ಪ್ರತಿಭಟಿಸುವ, ನ್ಯಾಯವನ್ನು ಪ್ರತಿಪಾದಿಸುವ ರಚನಾತ್ಮಕ ವಿಮರ್ಶೆಯಾಗಿದೆ. ಬಸವಣ್ಣನವರ ಆತ್ಮವಿಮರ್ಶೆಯ ವಚನಗಳು ಆಧುನಿಕ ಕಾವ್ಯವನ್ನು ಮತ್ತು ಸಮಾಜ ವಿಮರ್ಶೆಯ ವಚನಗಳು ಬಂಡಾಯ ಕಾವ್ಯವನ್ನು ನೆನಪಿಸುತ್ತವೆ. ಮೌಲ್ಯ ಪ್ರತಿಪಾದಿಸುವ ವಚನಗಳು ಭಾವಗೀತೆಯಂತೆ ಕಾಣುತ್ತವೆ. ಇಂತಹ ಅಭಿವ್ಯಕ್ತಿಯಿಂದಾಗಿ ಬಸವಣ್ಣ ಏಕಕಾಲಕ್ಕೆ ವ್ಯಕ್ತಿಯಾಗಿ, ಸಮಾಜದ ಸದಸ್ಯನಾಗಿ, ಲೋಕದ ಮಾನವನಾಗಿ ನಮ್ಮ ಕಣ್ಣ ಮುಂದೆ ಬರುತ್ತಾನೆ ಎಂದು ಡಾ. ಎಮ್. ಎಮ್. ಕಲ್ಬುರ್ಗಿಯವರು ಅಭಿಪ್ರಾಯಪಟ್ಟಿದ್ದಾರೆ.

## ಟಿಪ್ಪಣಿಗಳು:

1. ಕಲ್ಬುರ್ಗಿ ಎಮ್.ಎಮ್., (2001), ಷಟ್ ಸ್ಥಲ ವಚನಗಳು, ಬಸವಯುಗದ ವಚನ ಮಹಾಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 7
2. ಅದೇ, ಪು.ಸಂ. 36
3. ಅದೇ, ಪು.ಸಂ. 74

## ಪರಾಮರ್ಶನ ಗ್ರಂಥಗಳು:

1. ಕಲ್ಬುರ್ಗಿ ಎಮ್.ಎಮ್., (2001), ಷಟ್ ಸ್ಥಲ ವಚನಗಳು, ಬಸವಯುಗದ ವಚನ ಮಹಾಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.